ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Gamesa Renewable Private Limited ಕಂಪನಿಗೆ ರಾಯಚೂರು ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ 64 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಹಂಚಿಕೆ ಆದೇಶ ನೀಡುವ ಬಗ್ಗೆ.

ಓದಲಾಗಿದೆ: 1 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: KRED/08/GRPL-64MW(20+24+10) /Raichur/2016/G-1326

2 ದಿನಾಂಕ: 07.05.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

* * *

ಪ್ರಸ್ತಾವನೆ :-

M/s Gamesa Renewable Private Limited ಕಂಪನಿಯವರು ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ 30 ಮೆ.ವ್ಯಾ., ಮಾನ್ವಿ ಮತ್ತು ದೇವದುರ್ಗ ತಾಲ್ಲೂಕಿನ Shavantgal, Kasamdoddi, Wadvatti, Narbanda, Murkigudda & Rekalmardi ಗ್ರಾಮಗಳಲ್ಲಿ 24 ಮೆ.ವ್ಯಾ. ಮತ್ತು ಲಿಂಗಸುಗೂರು ತಾಲ್ಲೂಕಿನ Nirloti, Advibhavi, Thirthibhavi, Moildini and Saltampur ಗ್ರಾಮಗಳಲ್ಲಿ 10 ಮೆ.ವ್ಯಾ. ಸೇರಿ ಒಟ್ಟು 64 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಇದನ್ನು ಹಂಚಿಕೆ ಸಮಿತಿ ಸಭೆಯ ಮುಂದೆ ಮಂಡಿಸುವ ಸಲುವಾಗಿ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಹಾಗೂ ಇನ್ನಿತರೆ ವಿವರಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ರನ್ವಯ ಏಕ ಕಡತ ಪದ್ಧತಿಯಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2) ರನ್ವಯ ದಿನಾಂಕ :07.05.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯ ಮುಂದೆ ಮಂಡಿಸಲಾಗಿತ್ತು. ಸಮಿತಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, M/s Gamesa Renewable Private Limited ಕಂಪನಿಯವರು ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ 30 ಮೆ.ವ್ಯಾ., ಮಾನ್ವಿ ಮತ್ತು ದೇವದುರ್ಗ ತಾಲ್ಲೂಕಿನ Shavantgal, Kasamdoddi, Wadvatti, Narbanda, Murkigudda & Rekalmardi ಗ್ರಾಮಗಳಲ್ಲಿ 24 ಮೆ.ವ್ಯಾ. ಮತ್ತು ಲಿಂಗಸುಗೂರು ತಾಲ್ಲೂಕಿನ Nirloti, Advibhavi, Thirthibhavi, Moildini and Saltampur ಗ್ರಾಮಗಳಲ್ಲಿ 10 ಮೆ.ವ್ಯಾ. ಸೇರಿ ಒಟ್ಟು ಸ್ಥಾಪಿಸಲು ಉದ್ದೇಶಿಸಿರುವ 64 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಎರಡು ವರ್ಷಗಳಲ್ಲಿ ವಾಸ್ತವಿಕ ಸಾಮರ್ಥ್ಯಕ್ಕೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸುವ ಷರತ್ತಿಗೊಳಪಟ್ಟು ತತ್ವಶಃ ಅನುಮೋದನೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

---2)

ಈ ಮಧ್ಯೆ, ಅಭಿವೃದ್ಧಿದಾರರು ಹಂಚಿಕೆ ಪ್ರಸ್ತಾವನೆಯೊಂದಿಗೆ ತಾವು ಸಲ್ಲಿಸಿರುವ ಡಿಎಫ್‌ಆರ್ ಅನ್ನು ಡಿಪಿಆರ್ ಎಂದು ಪರಿಗಣಿಸಿ, ನೇರವಾಗಿ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಅಭಿವೃದ್ಧಿದಾರರ ಸದರಿ ಕೋರಿಕೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಸದರಿ ಪವನ ವಿದ್ಯುತ್ ಯೋಜನೆಯ ಹಂಚಿಕೆಯ ಪ್ರಸ್ತಾವನೆಯೊಂದಿಗೆ ಅಭಿವೃದ್ಧಿದಾರರು ಸಲ್ಲಿಸಿರುವ ಡಿಎಫ್‌ಆರ್‌ಅನ್ನು ಡಿಪಿಆರ್ ಎಂದು ಪರಿಗಣಿಸಿ, ನಿಯಮಾನುಸಾರ ನಿಗಧಿತ ಶುಲ್ಕವನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸುವ ಷರತ್ತಿನೊಂದಿಗೆ ಆದೇಶ ಹೊರಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 107 ಎನ್‌ಸಿಇ 2016,**
**ಬೆಂಗಳೂರು, ದಿನಾಂಕ :22.07.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು, M/s Gamesa Renewable Private Limited ಕಂಪನಿಯವರು ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲ್ಲೂಕಿನ Gudenhal, Madrainakota, Kuppogidda, Medinapur And Hotti ಗ್ರಾಮಗಳಲ್ಲಿ 30 ಮೆ.ವ್ಯಾ., ಮಾನ್ವಿ ಮತ್ತು ದೇವದುರ್ಗ ತಾಲ್ಲೂಕಿನ Shavantgal, Kasamdoddi, Wadvatti, Narbanda, Murkigudda & Rekalmardi ಗ್ರಾಮಗಳಲ್ಲಿ 24 ಮೆ.ವ್ಯಾ. ಮತ್ತು ಲಿಂಗಸುಗೂರು ತಾಲ್ಲೂಕಿನ Nirloti, Advibhavi, Thirthibhavi, Moildini and Saltampur ಗ್ರಾಮಗಳಲ್ಲಿ 10 ಮೆ.ವ್ಯಾ. ಸೇರಿ ಒಟ್ಟು 64 ಮೆ.ವ್ಯಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ನಿಯಮಾನುಸಾರ ನಿಗಧಿತ ಶುಲ್ಕವನ್ನು ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಗೆ ಪಾವತಿಸುವ ಷರತ್ತಿಗೊಳಪಟ್ಟು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು **ಹಂಚಿಕೆ** ಮಾಡಿ ಆದೇಶಿಸಲಾಗಿದೆ.

**Schedule**

**Geographical area description for 64 MW capacity wind power project**

| Sl.No. | Toposheet No. | Proposed capacity in MW | Near by villages of the proposed area and district. | Geographical area description of the project |
|---|---|---|---|---|
| 1 | 56 D/12 | 30 MW<br><br>(15 Nos x 2000 kW) | Gudenhal, Madrainakota, Kuppigudda and Medinapur, Hatti Lingsugur taluk, Raichur district. | The identified area is covered in Hatti near Lingsugur. The identified area is surrounded by points A, B, C, D, E & F and are held in the following Geographical co-ordinates as:<br><br>**Point A**:Lat:16°6'34.92"N, Long: 76°31'55.2"E<br>**Point B**:Lat:16°11'20.76"N, Long: 76°31'47.28"E<br>**Point C**:Lat:16°11'25.08"N, Long: 76°35'0.08"E<br>**Point D**:Lat:16°15'0"N Long:76°35'0"E<br>**Point E**:Lat:16°15'0"N Long:76°39'35.42"E<br>**Point F**:Lat:16°10'11.85"N Long:76°39'36.54"E<br><br>**Peaks:** 511, 521, 536, 522, 527, 547, 571 & 541 m AMSL. |

| | | | | |
|---|---|---|---|---|
| 2 | 56 D/16 | 24 MW<br>(12 Nos x 2000 kW) | Shavantgal, Kasamdoddi, Wadvatti, Narbanda, Murkigudda & Rekalmardi Manvi and Devdurga Taluks, Raichur district. | The identified area is situated Reserve Forest area and road crossing towards to Raichur and Hatti. The identified area is surrounded by points A, B, C & D and are held in the following Geographical co-ordinates as:<br>**Point A**: Lat:16°10'0''N, Long: 76°50'0''E<br>**Point B**: Lat:16°15'0''N, Long: 76°50'0''E<br>**Point C**: Lat:16°15'0''N, Long: 77°0'0''E<br>**Point D**: Lat:16°10'0''N Long:77°0'0''E<br>**Peaks:** 473, 551, 519, 462, 503, 543, 514 & 556 m AMSL. |
| **3** | 57 A/9 | 10 MW<br>(05 Nos x 2000 kW) | Nirloti, Advibhavi, Thirthibhavi, Moildini and Saltampur Lingusugur taluk, Raichur district. | The identified area is situated near Murgod town and area is covered in Reserve Forest. The identified area is surrounded by points A, B, C, D, E, F & G and are held in the following Geographical co-ordinates as:<br>**Point A**:Lat:15°56'59.92''N, Long: 76°30'0''E<br>**Point B**:Lat:16°0'0''N, Long: 76°30'0''E<br>**Point C**:Lat:**16**°0'0''N, Long: 76°33'34.02''E<br>**Point D**:Lat:15°58'12.18''N Long:76°35'0''E<br>**Point E**:Lat:15°56'7.47''N, Long: 76°35'15.79''E<br>**Peaks:** 523 & 540 m AMSL. |

**ಷರತ್ತುಗಳು:-**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06.1.2012 ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಈ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಇಎನ್ 354 ಎನ್‌ಸಿಇ 2008 ದಿನಾಂಕ: 19.01.2010 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 07 ಎನ್‌ಸಿಇ 2011 ದಿನಾಂಕ: 18.07.2011 ರಲ್ಲಿ ನಿಗದಿಪಡಿರುವ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
3. ಅಭಿವೃದ್ಧಿದಾರರು ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.
4. ಯೋಜನೆಯ ವಿವಿಧ ಹಂತದ ಚಟುವಟಿಕೆಗಳು ಹಾಗೂ ಯೋಜನೆಗಳಿಂದ ಪ್ರಾರಂಭದ ಹಂತದ ತನಕ ವಿವಿಧ ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
5. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ / ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಕೈಗೊಳ್ಳುತ್ತಿರುವುದರಿಂದ, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.

---4)